ವನ್ನರಸಿ ಕಂಪನಿಗಳಿಗೋ ವ್ಯಕ್ತಿಗಳಿಗೋ ನೀಡುವ ವೃತ್ತಿಪರ ಮಾಹಿತಿಗಳನ್ನು 'ಕರ್‍ರಿಕ್ಯುಲಂ ವೈಟೇ' ಎನ್ನುತ್ತೇವೆ.

'ರೆಸ್ಯುಮೆ' ಎನ್ನುವುದನ್ನು ಸಿ.ವಿಗೆ ಪರ್ಯಾಯ ಪದವನ್ನಾಗಿ ಗ್ರಹಿಸಬಹುದು. ಇಲ್ಲಿಯೂ ಇರುವುದು ನಿಮ್ಮ ವಿದ್ಯಾರ್ಹತೆ, ಸೇವಾನುಭವ, ಸಾಧ್ಯತೆಗಳ ಕುರಿತಾದ ವಿವರಣೆಯೇ. ರೆಸ್ಯುಮೆ ಹಾಗೂ ಸಿ.ವಿ ಮುಖ್ಯವಾಗಿ ಉದ್ಯೋಗದಾತರಿಗೆ ನೀಡುವ ಮಾಹಿತಿ. ಬಯೋಡೇಟಾ ನಮ್ಮ ವ್ಯಕ್ತಿತ್ವ ಪರಿಚಯಿಸುವ ಮಾಹಿತಿಗಳ ಕಟ್ಟು. ಕರ್‍ರಿಕ್ಯುಲಮ್ ವೈಟೇ ಎಂಬುದು ಲ್ಯಾಟಿನ್ ಮೂಲದ ಪದವಾಗಿದ್ದು ಏಕವಚನದ್ದಾಗಿದೆ. ಇದು ಜೀವನದ ಸಾಧನೆಗಳ ಪ್ರತಿಷ್ಠಿತರ ವಿಳಾಸ– ಇತ್ಯಾದಿ.

ಜೊತೆಗೆ ಆಯಾ ಕೆಲಸಗಳಿಗೆ ಅನುಗುಣವಾಗಿ ಹೆಚ್ಚಿನ ಮಾಹಿತಿಗಳು ಬೇಕಾಗಬಹುದು. ಉದಾಹರಣೆಗೆ ಉಪನ್ಯಾಸಕ ಹುದ್ದೆಗೆ ಅರ್ಜಿ ಹಾಕುವುದಿದ್ದರೆ ಸಂಶೋಧನಾ ಅನುಭವಗಳೂ ಮುಖ್ಯವಾಗುತ್ತವೆ. ಸೆಕ್ರೆಟೇರಿಯಲ್ ಸಹಾಯಕರ ಹುದ್ದೆಗೆ ಅರ್ಜಿ ಹಾಕುವುದಿದ್ದರೆ ನಿಮ್ಮ ಕಂಪ್ಯೂಟರ್ ಕೌಶಲ್ಯ, ಟೈಪಿಂಗ್ ವೇಗ ಇವುಗಳೂ ಬೇಕಾಗುತ್ತವೆ. ಎಂಜಿನಿಯರ್ ಹುದ್ದೆಗಾದರೆ ಯಂತ್ರಾಂಶ ಹಾಗೂ ತಂತ್ರಾಂಶಗಳ ಅನುಭವವನ್ನು ದಾಖಲಿಸಬೇಕಾದುದು ಅನಿವಾರ್ಯ. ಹಾಗೆಯೇ ನಿಮ್ಮ ಬಗ್ಗೆ ಶಿಫಾರಸು ಮಾಡಬಹುದಾದ




ಪಟ್ಟಿ ಎಂದರೆ ತಪ್ಪಲ್ಲ.

ಅಂದ ಮೇಲೆ, ಯಾವುದಾದರೂ ಕಂಡ ಕೆಲಸಕ್ಕಾಗಿ ಅರ್ಜಿ ಹಾಕುವ ವ್ಯಕ್ತಿ ತನ್ನ ವ್ಯಕ್ತಿತ್ವ ಹಾಗೂ ವೃತ್ತಿ ವಿವರಗಳನ್ನು ನೀಡುವ ಪಟ್ಟಿಯೇ ಸಿ.ವಿ ಎನ್ನಬಹುದು. ಈ ಸಿ.ವಿ ನಿಮ್ಮ ಶೈಕ್ಷಣಿಕ ಹಾಗು ವೃತ್ತಿಪರ ಸಾಧನೆಗಳ ಕನ್ನಡಿ. ಉದ್ಯೋಗ ನೀಡುವವರಿಗೆ ಮೊದಲ ನೋಟಕ್ಕೆ ಆಕರ್ಷಣೆಗೊಳ್ಳುವಂತೆ ನಿಮ್ಮ ಸಿ.ವಿ ಇರಬೇಕು. ಇದಕ್ಕೆ ಈ ಮಾಹಿತಿ ಇರಬೇಕು, ಇದಿರಬಾರದು ಎಂಬ ಕಾನೂನು ಇಲ್ಲ. ಆದಷ್ಟು ಅನನ್ಯವಾಗಿರಬೇಕು. ಬೇಕಾದ ಮಾಹಿತಿಯನ್ನು ಒದಗಿಸಬೇಕು. ಉದಾಹರಣೆಗೆ ಬಯೋಡೇಟಾ ಹಾಗೂ ಸಿವಿಯಲ್ಲಿ ಇರಲೇಬೇಕಾದ ಮಾಹಿತಿಯೆಂದರೆ– ಹೆಸರು, ಹುಟ್ಟಿದ ದಿನಾಂಕ/ವಯಸ್ಸು, ಲಿಂಗ, ವಿದ್ಯಾರ್ಹತೆ (ಮೇಲಿನದರಿಂದ ಕೆಳಗಿನವರೆಗೆ) ಯಂತ್ರ ತಂತ್ರ ಕೌಶಲ್ಯಗಳು, ಕೆಲಸದ ಅನುಭವ, ನಿಮ್ಮ ಬಗ್ಗೆ ಶಿಫಾರಸು ಮಾಡಬಹುದಾದ ಇಬ್ಬರು ಯಾರಾದರೂ ಇಬ್ಬರು ಗಣ್ಯವ್ಯಕ್ತಿಗಳ ಹೆಸರು, ವಿಳಾಸ, ಸಂಪರ್ಕದಾರಿಗಳನ್ನು ಬಹುತೇಕ ವಿದೇಶೀ ಕಂಪನಿಗಳು ಕೇಳುತ್ತವೆ. ಯಾಕೆಂದರೆ ಅವುಗಳಿಗೆ ಈ ವ್ಯಕ್ತಿಯ ಬಗ್ಗೆ ಏನೇನೂ ಗೊತ್ತಿರುವುದಿಲ್ಲ. ವ್ಯಕ್ತಿಯ ಹೇಳಿಕೆಯ ಆಧಾರದಲ್ಲಿ ನೇಮಕ ಮಾಡುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಯಾರಾದರೂ ಗಣ್ಯವ್ಯಕ್ತಿಗಳ ಶಿಫಾರಸು ಕೇಳುವುದು ಕ್ರಮ.

ಸಾಧನೆಗಳು, ಪ್ರಕಟಣೆಗಳು, ಅನುಭವಗಳು, ನಿಮ್ಮ ಸಿ.ವಿ.ಗೆ ಬೆಂಬಲವಾಗಿ ನಿಲ್ಲಬಲ್ಲ ಯಾವುದೇ ವಿಷಯಗಳನ್ನು ಸಿ.ವಿ.ಗೆ ಸೇರಿಸುವುದರಲ್ಲಿ ತಪ್ಪಿಲ್ಲ. ಅದು ಸುಳ್ಳು ಮಾಹಿತಿಯಾಗಿರಬಾರದು ಅಷ್ಟೇ. ಅಂತೂ ಸಿ.ವಿ. ಅಂದ್ರೆ ಮೊದಲ ನೋಟಕ್ಕೆ ನಿಮ್ಮನ್ನು ಗೆಲ್ಲಿಸುವ ಅಥವಾ ಸೋಲಿಸುವ ಸಾಧನ ಎಂಬುದನ್ನು ಮರೆಯಬಾರದು.